

# ನಟನೆ ಸಾಮಾಜಿಕ ಜವಾಬ್ದಾರಿ

**ಮಿಥುನ್ ತೇಜಸ್ವಿ**
ಉದಯದ 'ಕಾವ್ಯಾಂಜಲಿ'ಯ
ಕೈಲಾಸ್

◆ **ನೀವು ಗಮನಿಸಿದಂತೆ ನಿಮ್ಮ ಪಾತ್ರದ ಆಳ–ಅಗಲದ ಬಗ್ಗೆ ಹೇಳಬಹುದಾ?**

ಸಾಮಾನ್ಯವಾಗಿ ಧಾರಾವಾಹಿಯ ಕಥೆ ಸ್ತ್ರೀ ಪ್ರಧಾನವಾಗಿ ಇರುತ್ತದೆ. ಅದರಲ್ಲೂ ವಿಲನ್ ಪಾತ್ರದಲ್ಲಿ ಮಹಿಳೆಯೇ ಪ್ರಧಾನ ಭೂಮಿಕೆಯಲ್ಲಿ ಇರುತ್ತಾಳೆ. ನನಗೊಂದು ಇಲ್ಲಿ ಪ್ರಧಾನ ಪಾತ್ರ ಅದರಲ್ಲೂ ನೆಗೆಟಿವ್ ಸಿಕ್ಕಿರುವುದು ಗುಣಾತ್ಮಕ ಅಂಶ. ಧಾರಾವಾಹಿಯಲ್ಲಿ ಪುರುಷ ವಿಲನ್ ಇಲ್ಲ ಎನ್ನುವ ಕೊರತೆಯನ್ನು ಇದು ನೀಗಿಸಿದೆ ಎಂದು ಅನಿಸುತ್ತದೆ. ಕೈಲಾಸ್ ತುಂಬಾ ಸ್ವಾರ್ಥಿ, ತನ್ನ ಹಿತ ಸಾಧನೆ ಬಗ್ಗೆಯೇ ಯೋಚಿಸುತ್ತಾನೆ. ಸಂಪೂರ್ಣ ನೆಗೆಟಿವ್ ಪಾತ್ರ.

◆ **ಬಾಲ್ಯದ ದಿನದಲ್ಲಿ ಈ ರೀತಿ ಬೆಳೆಯುವ ಕನಸು ಇತ್ತಾ? ಇದೆಲ್ಲ ಹೇಗೆ ಸಾಧ್ಯ ಆಯಿತು?**

ಯಾವ ಕಲ್ಪನೆಯೂ ಇರಲಿಲ್ಲ. ನಾನು ಹುಟ್ಟಿದ್ದು ಚಿಕ್ಕಮಗಳೂರು ಜಿಲ್ಲೆಯ ಮೂಡುಗೆರೆ ತಾಲ್ಲೂಕಿನ ಹಳ್ಳಿ. ಪ್ರೌಢಶಾಲೆಯನ್ನು ಬೆಂಗಳೂರಿನ ನ್ಯಾಷನಲ್ ಸ್ಕೂಲಿನಲ್ಲಿ ಮಾಡಿದೆ. ಅದು ರಂಗಭೂಮಿಯ ಚಟುವಟಿಕೆಯ ತಾಣವಾಗಿತ್ತು. ಅಲ್ಲಿನ ಪಠ್ಯೇತರ ಕ್ರಿಯೆಯನ್ನು ಗಮನಿಸುತ್ತಿದ್ದೆ. ನನ್ನ ಅಂಕಲ್ ರಮೇಶ್ ರಾವ್ ಸಿನಿಮಾಗಳಲ್ಲಿ ಗುರುತಿಸಿಕೊಂಡಿದ್ದರು. ಅವರ ಜೊತೆ ಆಗಾಗ ಚಿತ್ರೀಕರಣಕ್ಕೆ ಹೋಗುತ್ತಿದ್ದೆ. ಆ ವಯಸ್ಸಿನಲ್ಲಿ ಸೆಲೆಬ್ರಿಟಿಗಳನ್ನು ನೋಡುವ ಸಹಜ ಆಸೆ.

ಒಮ್ಮೆ ಜಗ್ಗೇಶ್ ಅವರ 'ಮಾರಿಕಣ್ಣು ಹೋರಿಮ್ಯಾಗೆ' ಚಿತ್ರೀಕರಣಕ್ಕೆ ಹೋಗಿದ್ದೆ. ಅಲ್ಲಿ ನಾಯಕಿ ತಮ್ಮನ ಪುಟ್ಟ ಪಾತ್ರಕ್ಕೆ ಅವಕಾಶ ಇತ್ತು. ಬಹುಶಃ ಅದು 1998 ಇರಬಹುದು. ಆ ಮೂಲಕ ಅಭಿನಯ ಜಗತ್ತಿಗೆ ಚೊಚ್ಚಲ ಪಾದಾರ್ಪಣೆ ಮಾಡಿದೆ. ನಂತರ ನಮ್ಮ ಅಂಕಲ್ ರಮೇಶ್ ಅರವಿಂದ್–ಚಾರುಲತಾ ಅವರ 'ಓ ಮಲ್ಲಿಗೆ'ಯಲ್ಲಿ ಕೆಲಸ ಮಾಡುತ್ತಿದ್ದರು. ಒಂದು ದಿನ ರಮೇಶ್ ನನ್ನ ತಮ್ಮನ ಪಾತ್ರ ಇದೆ ಮಾಡುತ್ತೀಯಾ ಎಂದು ಅವಕಾಶ ಕೊಟ್ಟರು. ನಂತರ ಅವರ 'ಆರ್ಯಭಟ' ಸಿನಿಮಾದಲ್ಲಿ ನಟಿಸಿದೆ. ಅಂಕಲ್, ಶಿವಣ್ಣ ಅವರ 'ಇಂದ್ರಧನುಷ್' ಕೆಲಸ ಮಾಡುತ್ತಿದ್ದರು.

ಆ ಸಮಯದಲ್ಲಿ ರಮೇಶ್ ಅರವಿಂದ್ ಮತ್ತು ನನ್ನ ಅಂಕಲ್, ಫಿಲ್ಮಂ ಇನ್‌ಸ್ಟಿಟ್ಯೂಟ್‌ಗೆ ಸೇರಲು ಸಲಹೆ ನೀಡಿದರು. ಶಿವಣ್ಣ ಕೂಡ ಚೆನ್ನೈಗೆ ಹೋಗು ಅಲ್ಲೇ ನಾನೂ ಓದಿದ್ದು ಎಂದರು. ಆಗಲ್ಲಿ ದರ್ಶನ್ ಅಧ್ಯಯನ ಮಾಡುತ್ತಿದ್ದರು. ಅವರ ಮೂಲಕವೇ ನನಗೆ ಅರ್ಜಿ ಸಿಕ್ಕಿತು. ಸಂಸ್ಥೆಗೆ ಸೇರಿ 8 ತಿಂಗಳಿಗೆ ತಮಿಳು ಸಿನಿಮಾಕ್ಕೆ ನಾಯಕನಾಗಿ ನಟಿಸುವ ಅವಕಾಶ ಸಿಕ್ಕಿತು. ಸಿನಿಮಾ ಅಧ್ಯಯನವನ್ನು ಅಲ್ಲಿಗೇ ಬಿಟ್ಟೆ.

◆ **ಬೆಳ್ಳಿ ತೆರೆಯಲ್ಲಿ ಬುನಾದಿ ಹಾಕಿ ಕಿರುತೆರೆಯಲ್ಲಿ ಮಹಲು ಕಟ್ಟುವ ಪಲ್ಲಟ ಹೇಗಾಯಿತು?**

ನಾನು ತುಂಬ ಒಳ್ಳೆಯ ಸಿನಿಮಾ ಮಾಡಿದೆ. ಆದರೆ ಸಿಗಬೇಕಾದ ಮನ್ನಣೆ ನಿರೀಕ್ಷಿತಮಟ್ಟಕ್ಕೆ ಸಿಗಲಿಲ್ಲ. ಈಗಿನಂತೆ ಆಗ ಹೊಸ ಮುಖಗಳಿಗೆ ಅವಕಾಶ ಸಿಗ್ತಾ ಇರಲಿಲ್ಲ. ಒಂದು ಸಿನಿಮಾ ಜನಪ್ರಿಯತೆಯ ಮೇಲೆ ಮುಂದಿನ ಅವಕಾಶ ಸಿಗ್ತಾ ಇತ್ತು. ಸ್ಟಾರ್‌ಗಳೇ ಹೆಚ್ಚು ಮುಖ್ಯ ಆಗುತ್ತಿದ್ದರು. ಈಗಿನಂತಹ ಅವಕಾಶಗಳಾಗಲಿ ಒಟಿಟಿ ವೇದಿಕೆಯಾಗಲಿ ಇರಲಿಲ್ಲ. ಇದು ದೊಡ್ಡ ಸವಾಲಾಗಿತ್ತು. ಆ ಅವಧಿಯಲ್ಲಿ ಐವತ್ತು ಅರವತ್ತು ಮಂದಿ ಸಿನಿಮಾಕ್ಕೆ ಬಂದಿದ್ದೇವೆ. ಅದರಲ್ಲಿ ಶೇ. 90ರಷ್ಟು ಮಂದಿ ಉಳಿಯಲೇ ಇಲ್ಲ. ಸುದೈವಶಾತ್ ನನಗೆ ಅವಕಾಶ ಸಿಗ್ತಾನೆ ಇದೆ. 2000–12ರವರೆಗೆ ಚೆನ್ನೈಯಲ್ಲೇ ಇದ್ದೆ. ಆ ಸಮಯದಲ್ಲಿ ಸಮಯದಲ್ಲಿ ತಮಿಳಿನಲ್ಲಿ ಒಂದು ಧಾರಾವಾಹಿಗೆ ಅವಕಾಶ ಸಿಕ್ಕಿತು ಹಾಗಾಗಿ ಬಂದೆ. ರಾಮ್‌ಜೀ ಕನ್ನಡದಲ್ಲಿ ಅವಕಾಶ ಕೊಟ್ಟರು. ನೆಗೆಟೀವ್ ಪಾತ್ರ ಮಾಡುವ ಆಸೆ ಇತ್ತು ಅದನ್ನು ಮಾಡುತ್ತಿದ್ದೇನೆ.

◆ **ದೊಡ್ಡ ತೆರೆಯ ತೀವ್ರ ವೇಗ, ಚಿಕ್ಕ ತೆರೆಯ ಮಂದ ವೇಗಕ್ಕೆ ಹೇಗೆ ಹೊಂದಿಕೆ ಆಯಿತು?**

ನನಗೆ ತೆರೆ ಅಂದರೆ ಒಂದೇ. ಎಲ್ಲೇ ಆದರೂ ಅಭಿನಯ ಮುಖ್ಯ. ದೊಡ್ಡ ತೆರೆಯಲ್ಲಿ ದಿನಕ್ಕೆ ಎರಡು ಸೀನ್ ಮಾಡುತ್ತೇವೆ. ಕಿರುತೆರೆಯಲ್ಲಿ ಹಾಗೆ ಆಗುವುದಿಲ್ಲ. ನಿತ್ಯವೂ ಒಂದೆರಡು ಕಂತು ಮಾಡಬೇಕು. ನಟನೆ ಆಸಕ್ತಿ ಇರುವುದರಿಂದ ತುಂಬ ಚೆನ್ನಾಗಿದೆ ಎಂದು ಅನಿಸುತ್ತದೆ. ವೇದಿಕೆ ಯಾವುದಾದರೇನು ನಮ್ಮ ಕೆಲಸ ನಾವು ಮಾಡಬೇಕು ಎಂಬ ಮನೋಸ್ಥಿತಿಯಲ್ಲಿ ಕೆಲಸ ಮಾಡಿದ್ದರಿಂದ ಹೊಂದಾಣಿಕೆ ಕಷ್ಟ ಆಗಲಿಲ್ಲ. ಒಬ್ಬ ನಟ ಚಿಕ್ಕ ತೆರೆಯಿಂದ ಆರಂಭಿಸಿದರೆ ಚೆನ್ನಾಗಿರುತ್ತದೆ. ಏಕೆಂದರೆ ಇಲ್ಲಿಯ ಅನುಭವ ನಮ್ಮನ್ನು ಒಳ್ಳೆಯ ನಟನಾಗಿ ರೂಪಿಸುತ್ತದೆ. ಇವತ್ತಿನ ಚಿತ್ರೀಕರಣ ಮುಂದಿನ ವಾರವೇ ತೆರೆಯಲ್ಲಿ ಪ್ರಸಾರವಾಗುತ್ತದೆ. ಸಿನಿಮಾದಲ್ಲಿ ಹಾಗೆ ಆಗುವುದಿಲ್ಲ. ಈ ವೇದಿಕೆ ಮೊದಲೇ ಸಿಕ್ಕಿದ್ದರೆ ನನ್ನ ಬೆಳವಣಿಗೆ ಇನ್ನೂ ಬೇರೆ ರೀತಿ ಇರುತ್ತಿತ್ತು. ಟೀವಿಯಲ್ಲಿ ಹೆಚ್ಚು ಜನಪ್ರಿಯತೆ ಸಿಗುತ್ತದೆ. ಎಲ್ಲೆಡೆ ಕನ್ನಡಿಗರು ಗುರುತಿಸುತ್ತಾರೆ. 'ಕಮಲಿ' ಮತ್ತು 'ಕಾವ್ಯಾಂಜಲಿ' ಮೂಲಕ ಜನ ಇನ್ನೂ ಹತ್ತಿರ ಆಗಿದ್ದಾರೆ. ಅವರ ಪ್ರೀತಿ ವಿಶ್ವಾಸ ಸಿಕ್ಕಿದೆ. ನಟನೆ ಸಾಮಾಜಿಕ ಜವಾಬ್ದಾರಿ ಎಂದುಕೊಂಡಿದ್ದೇನೆ.

■ **ರಾಘವೇಂದ್ರ ಕೆ.**